ಅ) ಹುಮ್ನಾಬಾದ್‌ನಲ್ಲಿ ಪದವಿ ಕಾಲೇಜ್ ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಆ) ಗಡಿ ತಾಲ್ಲೂಕಿನಲ್ಲಿ ಕಾಲೇಜು ಪ್ರಾರಂಭವಾಗದಿರಲು ಕಾರಣವೇನು;

ಇ) ಪದವಿ ಕಾಲೇಜು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಡಿ. ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು):

ಅ) ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಗಡಿ ಪ್ರದೇಶವಾದ ಹುಮ್ನಾಬಾದಿನಲ್ಲಿ ಹಾಲಿ ಒಂದು ಖಾಸಗಿ ಅನುದಾನಿತ ಮತ್ತು ಖಾಸಗಿ ಅನುದಾನರಹಿತ ಕಾಲೇಜುಗಳಿದ್ದದರಿಂದ, ಸದರಿ ಸ್ಥಳದಲ್ಲಿ ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸುವ ಅಗತ್ಯ ಕಂಡುಬಂದಿರಲಿಲ್ಲ.

ಇ) ಪರಿಶೀಲನಾ ನಂತರ ಸೂಕ್ತ ನಿರ್ಧಾರ ಕೈಗೊಳ್ಳಲಾಗುತ್ತದೆ.

840 (1302) ಶ್ರೀ ಮೀರಾಜುದ್ದೀನ್ ಪಟೇಲ್ (ಹುಮ್ನಾಬಾದ್): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾರಂಜಾ ಯೋಜನೆಗೆ ಇದುವರೆಗೆ ಖರ್ಚಾಗಿರುವ ಹಣ ಎಷ್ಟು ಹಾಗೂ ಯೋಜನೆ ಪೂರ್ಣಗೊಳಿಸಲು ಇನ್ನೂ ಬೇಕಾಗಿರುವ ಒಟ್ಟು ಹಣವೆಷ್ಟು;

ಆ) ಈ ಯೋಜನೆ ವಿಳಂಬವಾಗಲು ಕಾರಣವೇನು;

ಇ) ಈ ಯೋಜನೆ ಪೂರ್ಣಗೊಳಿಸಲು ಎಷ್ಟು ಕಾಲಾವಕಾಶ ಹಾಗೂ ಇನ್ನೂ ಎಷ್ಟು ಹಣ ಬೇಕಾಗುತ್ತದೆ (ಕಾಮಗಾರಿವಾರು ವಿವರ ನೀಡುವುದು)?

ಶ್ರೀ ಕೆ. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು):

ಅ) ಕಾರಂಜಾ ಯೋಜನೆಗೆ ಮೇ–2006ರವರೆಗೆ ರೂ. 440.40 ಕೋಟಿಗಳು ವೆಚ್ಚ ಮಾಡಲಾಗಿದೆ. ಈ ಯೋಜನೆಯನ್ನು ಪೂರ್ಣಗೊಳಿಸಲು ಇನ್ನೂ ರೂ. 42.07 ಕೋಟಿಗಳು ಬೇಕಾಗಿರುತ್ತದೆ.

ಆ) ಈ ಯೋಜನೆ ವಿಳಂಬವಾಗಲು ಪ್ರಮುಖ ಕಾರಣಗಳು ಕೆಳಗಿನಂತಿವೆ

(1) ಯೋಜನೆಯ ಪ್ರಾರಂಭ (1971–72 ದಿಂದ 1997ರ ವರೆಗೆ ವಾರ್ಷಿಕ ಅನುದಾನದ ಕೊರತೆ.

(2) ಹಲವಾರು ಭೂಸ್ವಾಧೀನ ಪ್ರಕರಣಗಳಲ್ಲಿ ಅಂತಿಮಗೊಳ್ಳುವಲ್ಲಾದ ವಿಳಂಬ

(3) 2000 ರಿಂದ 2002ರವರೆಗೆ ತಾಂತ್ರಿಕ ಸಿಬ್ಬಂದಿಯ ಕೊರತೆ.

(4) ಸಾರ್ವತ್ರಿಕ ಚುನಾವಣೆ, ಸಂಸತ್ ಚುನಾವಣೆ ಹಾಗೂ ಜಿಲ್ಲಾ ಪಂಚಾಯತ್ ಚುನಾವಣೆಗಳ ಪ್ರಯುಕ್ತ ಮಾದರಿ ನೀತಿ ಸಂಹಿತೆಯ ಪ್ರಕಾರ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳು ಆಗಾಗ್ಗೆ ಮುಂದೂಡಲ್ಪಟ್ಟಿರುವುದರಿಂದ

ಇ) ಈ ಯೋಜನೆಯನ್ನು ಮಾರ್ಚ್– 2007 ರೊಳಗೆ ಪೂರ್ಣಗೊಳಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಈ ಯೋಜನೆಯನ್ನು ಪೂರ್ಣಗೊಳಿಸಲು ಇನ್ನೂ ರೂ. 42.07 ಕೋಟಿಗಳು ಬೇಕಾಗುತ್ತದೆಂದು ಅಂದಾಜಿಸಲಾಗಿದೆ. ವಿವರ ಈ ಕೆಳಗಿನಂತಿದೆ.

ಕ್ರ.ಸಂ.	ಯೋಜನೆಯ ಕಾಮಗಾರಿಗಳ ವಿವರ.	ರೂ. ಕೋಟಿಗಳಲ್ಲಿ
1	ಅತಿನಾಳ ಏತ ನೀರಾವರಿ ಯೋಜನೆ	ರೂ.18.09
2	ಕಾರಂಜಾ ಏತ ನೀರಾವರಿ ಯೋಜನೆಯ ರೈಸಿಂಗ್‌ಮೇನ್ ಪುನರ್ ನಿರ್ಮಾಣ ಕಾಮಗಾರಿ	ರೂ. 2.82
3.	ಕಾರಂಜಾ ಏತ ನೀರಾವರಿ ಕಾಲುವೆ ಜಾಲದ ಬಾಕಿ ಕಾಮಗಾರಿಗಳಿಗಾಗಿ.	ರೂ. 8.00
4.	ಬಲದಂಡೆ ಕಾಲುವೆ ಜಾಲದ ಉಳಿದ ಕಾಮಗಾರಿಗಳು, ಪುನರ್ವಸತಿ ಕೇಂದ್ರಗಳ ಕಾಮಗಾರಿ., ಜಲಾಶಯದ ಕೆಳಭಾಗದಲ್ಲಿ ಉದ್ಯಾನವನ ನಿರ್ಮಾಣದ ಕಾಮಗಾರಿ ಹಾಗೂ ಇತರೆ ಕಾಮಗಾರಿಗಳಿಗೆ.	ರೂ. 7.02
5	ಯೋಜನೆಯ ಸಿಬ್ಬಂದಿ ವೆಚ್ಚಕ್ಕಾಗಿ	ರೂ. 6.14
	ಒಟ್ಟು	ರೂ. 42.07

841 (1026) ಶ್ರೀ ಮೋಹನ್ ಕೃಷ್ಣಶೆಟ್ಟಿ (ಕುಮಟಾ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಮಟಾ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಹೊನ್ನಾವರ ಪಟ್ಟಣದಲ್ಲಿ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದರಿಂದಾಗಿ ಬಡವರು ಶಿಕ್ಷಣದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;